ಗಿ ಅನೇಕ ಸಲ ಇದರ ಬಗ್ಗೆ ಹೇಳಿದ್ದೇನೆ. 18 ವರ್ಷಗಳ ಹಳೆಯ ಈ ಕೆರೆಯ ಗ್ಗೆ ಕಳೆದ 3 ವರ್ಷದಿಂದ ಪ್ರಶ್ನೆ ಕೇಳುತ್ತಿದ್ದೇನೆ. 7 ಅಥವಾ 8 ಲಕ್ಷ ರೂಪಾಯಿ ಂದಾಜಿನ ಈ ಕೆರೆ ಇವತ್ತು 34 ಲಕ್ಷ ರೂಪಾಯಿಗೆ ಬಂದು ನಿಂತಿದೆ. ಇವತ್ತು ಸುತ್ತಮುತ್ತಲಿನ ತಾಲ್ಲೂಕಿನ ಜನರಿಗೆ ನೀರಿಗೆ ಬಹಳ ತೊಂದರೆ ಇದ್ದು ಈ ಕಾರ್ಯ ದಷ್ಟು ಮುಗಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಡಾ॥ ಆರ್.ಬಿ. ಚೌಧರಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವುದು ಜ. ಕಳೆದ 16 ವರ್ಷಗಳ ಹಿಂದೆ ಕೆಲಸ ಪ್ರಾರಂಭ ಆಗಿದೆ. ಆದರೆ ಇದುವರೆಗೂ ೂಡ ಪೂರ್ತಿ ಆಗಿಲ್ಲ. ಆದರೆ ಈ ಕೆರೆಯನ್ನು ನಮ್ಮ ಇಲಾಖೆಗೆ 1992ರಲ್ಲಿ ಹಿಸಲಾಗಿದೆ. 1993-94ರಲ್ಲಿ ನಾನು ಇದಕ್ಕೆ 2 ಲಕ್ಷ ರೂಪಾಯಿ ಅನುದಾನ ೂಟ್ಟಿದ್ದೇನೆ. ಈಗ 1994-95ರಲ್ಲಿ ಆದ್ಯತೆ ಮೇರೆಗೆ ಅನುದಾನ ಒದಗಿಸಿ ಆದಷ್ಟು ಾಗ್ರತೆ ಪೂರ್ತಿ ಮಾಡಿಕೊಡುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಸಿ. ವೀರಭದ್ರಯ್ಯ: ಕೆರೆ 2 ಕಡೆ ಆಗಿದೆ. ಹಳ್ಳದ ಭಾಗ ಮಾತ್ರ ಗಿದೆ. ಅಧಿಕಾರಿಗಳು ಮನಸ್ಸು ಮಾಡಿದರೆ 2 ತಿಂಗಳಲ್ಲಿ ಮುಗಿಸಬಹುದು. ಈ ಬಗ್ಗೆ ಕಳೆದ ಅಧಿವೇಶನದಲ್ಲಿ ಒತ್ತಾಯ ಮಾಡಿದೆ. ಆಗ ಇದೇ ಉತ್ತರ ಬಂತು. ೨ ಜನರಿಗೆ ನೀರಿನ ಅವಶ್ಯಕತೆ ಇದೆ. ಆದ್ದರಿಂದ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ೀಳಿಕೊಳ್ಳುತ್ತೇನೆ.

ಡಾ॥ ಆರ್.ಬಿ ಚೌಧರಿ: ನಾನು ಇರಕಸಂದ್ರಕ್ಕೆ ಬಂದಿದ್ದಾಗ ತಾವು ಈ ಸಮಸ್ಯೆ ನನಗೆ ತಿಳಿಸಿದ್ದಿರಿ. ಆಗ ಈ ಕೆರೆ ನಮ್ಮ ಇಲಾಖೆಗೆ ವರ್ಗಾಯಿಸಲ್ಪಟ್ಟಿತ್ತು. ತಗಲೇ ನಮ್ಮ ಅಧಿಕಾರಿಗಳಿಗೆ ಈ ಬಗ್ಗೆ ನೋಡಿಕೊಂಡು ಬರಲು ಆಜ್ಞೆ ಮಾಡಿದೆ. ಈಗಾಗಲೇ ಅವರು ನೋಡಿಕೊಂಡು ಬಂದು ಒಂದು ನಕ್ಷೆ ತಯಾರು ಮಾಡಿದ್ದಾರೆ. ಯಾವ ರೀತಿ ಬೇಗ ಮಾಡಬಹುದೆಂದು. ಈ ದಿಸೆಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಗುಲ್ಬರ್ಗಾ ನಗರದಲ್ಲಿರುವ ನೀರಾವರಿ ಉಪವಿಭಾಗ ಕಾರ್ಯಾಲಯಗಳಲ್ಲಿ ಒಂದನ್ನು ಸೇಡಂ ಕೇಂದ್ರಕ್ಕೆ ಸ್ಥಳಾಂತರ

205 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ನಗರದಲ್ಲಿರುವ ಮೂರು ಸಣ್ಣ ನೀರಾವರಿ ಉಪವಿಭಾಗ ಕಾರ್ಯಾಲಯಗಳಲ್ಲಿ ಒಂದನ್ನು ಸೇಡಂ ಕೇಂದ್ರ ಸ್ಥಾನಕ್ಕೆ ಶೀಘ್ರವಾಗಿ ಸ್ಥಳಾಂತರಿಸಲು ಕ್ರಮ ತೆಗೆದು ಕೊಳ್ಳಲಾಗುವುದೆಂದು ಉತ್ತರ ನೀಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ ನಗರದಲ್ಲಿ ಸಣ್ಣ ನೀರಾವರಿ ಉಪವಿಭಾಗದ ಕಾರ್ಯಾಲಯ ಮೂರರಲ್ಲಿ ಒಂದನ್ನು ಸ್ಥಳಾಂತರಿಸಲು ಪರ್ಯಾಯ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿದೆಯೇ?*

ಇ) *ಸೇಡಂ ನಗರ ಉಪವಿಭಾಗ, ಸೇಡಂಗೆ ಗುಲ್ಬರ್ಗಾ ನಗರದಲ್ಲಿರುವ ಮೂರು ಸಣ್ಣ ನೀರಾವರಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ (ಉಪವಿಭಾಗ) ಕಾರ್ಯಾಲಯಗಳಲ್ಲಿ ಒಂದು ಉಪವಿಭಾಗವನ್ನು ಸ್ಥಳಾಂತರಿಸಿ ಈ ಭಾಗದ ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳನ್ನು ನಿರ್ವಹಿಸಲು ಅನುಕೂಲ ಮಾಡಿ ರೈತರಿಗೆ ನೀರಾವರಿ ಅನುಕೂಲ ಯಾವಾಗ ಮಾಡಿಕೊಡಲಾಗುವುದು?*

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಇಲ್ಲ - ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಾಗಿ ಮಾತ್ರ ಅ ನೀಡಿದೆ.

ಆ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಈ ಬಗ್ಗೆ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ನ ಮೂರು ಉಪವಿಭಾಗ ಕಾರ್ಯಾಲಯಗಳಲ್ಲಿ ಒಂದನ್ನು ಸೇಡಂ ಕೇಂದ್ರ ಸ್ಥ ಶೀಘ್ರ ಸ್ಥಳಾಂತರಿಸಬೇಕೆಂದು ಕೇಳಿದ ಪ್ರಶ್ನೆಗೆ, ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವು ಮಾತ್ರ ಉತ್ತರ ನೀಡಲಾಗಿದೆ ಎಂದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಉತ್ತರ ನೀಡಿದ್ದೀರಿ. ಸೇ ಕಂದಾಯ ಉಪವಿಭಾಗವಾಗಿ ಮೊದಲು ಸಣ್ಣ ನೀರಾವರಿ ಉಪವಿಭಾಗ ಎ ಇದ್ದು 6-7 ವರ್ಷಗಳ ಮೊದಲು ಇದನ್ನು ಸ್ಥಳಾಂತರಿಸಲಾಯಿತು. ಈ ಭಾಗ ಹೆಚ್ಚು ಹೆಚ್ಚು ಕೆಲಸ ಇರುವ ಕಾರಣ ಈಗಾಗಲೇ ಕಾರ್ಯನಿರ್ವಾಹಕ ಅಭಿಯಂತರ ಗುಲ್ಬರ್ಗ - ಇವರು ಪತ್ರ ಬರೆದು ಮೂರು ಸಣ್ಣನೀರಾವರಿ ಉಪವಿಭಾಗ ಗುಲ್ಬರ್ಗಾದಲ್ಲಿ ಇದ್ದು ಅದರಲ್ಲಿ ಒಂದನ್ನು ಸೇಡಂಗೆ ಸ್ಥಳಾಂತರಿಸಲು 18.3.93ರ ಶಿಫಾರಸ್ಸು ಮಾಡಿರುವುದು ನಿಜವೇ? ಒಂದು ವೇಳೆ ಶಿಫಾರಸ್ಸು ಮಾಡಿ ಇಲ್ಲಿಯವರೆಗೆ ವಿಳಂಬ ಮಾಡಿದ್ದು ಏಕೆ?

ಡಾ॥ ಆರ್.ಬಿ. ಚೌಧರಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸೇಡಂ ಸ ಡಿವಿಜನ್ ಬೇಕಾಗಿದೆ ಎಂದಿದ್ದಾರೆ. ಆ ಸಬ್ಡಿವಿಜನ್ನಲ್ಲಿ ಏನಾದರೂ ವರ್ಕ್ ಲೋ ಹೆಚ್ಚು ಇದ್ದರೆ ನಾನು ಕೊಟ್ಟೇ ಕೊಡುತ್ತೇನೆ ಎಂದು ಭರವಸೆ ಕೊಡುತ್ತೇನೆ. ಹೆ ಕೆಲಸ ಸೇಡಂ ಸಬ್ಡಿವಿಜನ್ನಲ್ಲಿ ಇದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಒಂದು ವೇಳೆ ನಿಜವಾದರೆ ಪರಿಶೀಲನೆ ಮಾಡಿ ತ್ವರಿತವಾಗಿ ಸಬ್ಡಿವಿಜನ್ ಕೊಡುತ್ತೆ

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಹೆಚ್ಚುಹೆಚ್ಚು ಕೆಲಸ ಈಗಾಗಲೇ ಎಂದು ಕಾರ್ಯನಿರ್ವಾಹಕ ಅಭಿಯಂತರರು ತನಿಕಾ ವರದಿಯನ್ನು ಕಳುಹಿಸಿದ್ದಾ ಆ ಭಾಗದ ಜನರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಮಾರ್ಚಿ ತಿಂಗಳ ಒ ಸ್ಥಳಾಂತರಿಸಿ ಅವರಿಗೆ ಅನುಕೂಲ ಮಾಡಿಕೊಡುತ್ತೀರಾ ಎಂದು ಕೇಳುತ್ತೇನೆ.

ಡಾ॥ ಆರ್.ಬಿ. ಚೌಧರಿ: ಕೊಡುತ್ತೇವೆಂದು ಹೇಳಿದ್ದರೂ ಸುತ್ತಿ ಬಳಸಿ ಅವ ಮತ್ತೆ ಅದನ್ನೇ ಕೇಳುತ್ತಿದ್ದಾರೆ.

1993-94ರಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಕಾಮಗಾರಿ ಕೆಲಸಕ್ಕೆ ಹ ಬಿಡುಗಡೆ

152 - ಶ್ರೀ ಜಿ.ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಲೋಕೋಪಯೋ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಲೋಕೋಪಯೋ ಇಲಾಖಾವತಿಯಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು?

ಆ) ಅವುಗಳಿಗೆ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಹೊಳೆನರಸೀಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.